ಬರೀತಾನೇ ಇದ್ದಳು... ಕಡೆಗೆ, ಹೌದು... ಈಗಲೂ ಅದನ್ನೇ ಹೇಳುತೀನಿ... ನೀನು ಹಕ್ಕು ಸಾಧಿಸುತ್ತಿರುವ ಸಂತೋಷವು ನಿನ್ನ ಮಕ್ಕಳನ್ನು ದುಃಖಿಕ್ಕೀಡು ಮಾಡದ ಪಕ್ಷಕ್ಕೆ, ಈಗಲೂ ಅದನ್ನೇ ಹೇಳುತೀನಿ... ಅಂತ ಬರೆದೆ... ಅದಾದ ಮೇಲೆ, ಇವೊತ್ತೇ ಅಂದರೆ ಕೆಲಸಮಯಕ್ಕೆ ಹಿಂದಷ್ಟೇ ನಿನಗೆ ತೋರಿಸಿದೆನಲ್ಲ ಆ ಮೆಸೇಜು ಬಂತು....'

ವಿಷಯವಷ್ಟೂ ವಿಶದವಾಯಿತೋ, ಕ್ಲೇಶ ಕಟ್ಟಿಕೊಂಡು ಮಿಕ್ಕಿತೋ... ನಿಜಕ್ಕೂ ಹೊಳೆಯಲಿಲ್ಲ. ಕೆಲಹೊತ್ತು ಸುಮ್ಮಗೆ ಕುಳಿತಿದ್ದಾಯಿತು. ನನ್ನ ನಾನು ಸಂಭಾಳಿಸಿಕೊಂಡಷ್ಟೂ ಆಘಾತವು ಮೇಲುಗೈಯಲ್ಲಿ ಕಾಡುತ್ತಿತ್ತು. ಬಡಿದು ಬರಸಿಡಿಲು ರಾಚುತ್ತಿತ್ತು. ಮಧುಕರಿಯೂ ವಿಷಣ್ಣನಾಗಿ ಮಾತಿಲ್ಲದೆ ಉಳಿದ.

ಇನ್ನು, ಅಲ್ಲೇ ಹೆಚ್ಚು ಹೊತ್ತು ಉಳಿದು, ಅಲೇಕ್ಸ್ಯನನ್ನೂ ಅವನ ಹೊಸಕನ್ನೆಯನ್ನೂ ಸತಾಯಿಸಕೂಡದೆಂದು ಮನಸ್ಸು, ಸರಕ್ಕನೆ ಎಚ್ಚರಿಸಿತಾಗಿ, 'ಇನ್ನು ಹೊರಡುತೀವಿ, ಅಲೇಕ್ಸ್ಯ... ದಿಸೀಸ್ ನಾಟ್ ದಿ ಪ್ಲೇಸ್ ಫಾರ್ ಮೈ ಗ್ರೀಫ್... ನನ್ನ ಸಂತಾಪಗಳಿಗೆ ತಕ್ಕ ಸಂದರ್ಭ ಇದಾಗಿಲ್ಲ... ನೀನು ನಿನ್ನ ವಧುವಿನೊಡನಿರಬೇಕು ಈಗ...' ಎಂದು ಒತ್ತಾಯದಿಂದ ಕುಳಿತಲ್ಲಿಂದೆದ್ದೆ. ಮಧುಕರಿಯೂ ನನ್ನೊಡನೆದ್ದು, ಅಲೇಕ್ಸ್ಯನಿಗೆ ಅವೇ ಮಾತುಗಳನ್ನಾಡಿದ. 'ಇವಳೇನೂಂತ ನನಗೆ ಚೆನ್ನಾಗಿ ಗೊತ್ತು. ಇಪ್ಪತ್ತೆಂಟು ವರ್ಷ ಸಂಸಾರ ನಡೆಸಿದ್ದೀನಿ... ತಂತಾನು ಸರಿ ಹೋಗಬೇಕು... ಸರಿ ಹೋಗುತಾಳೆ... ಐ ವಿಲ್ ಬಿ ಇನ್ ಟಚ್...' ಎಂದು ನನ್ನ ಕುರಿತಾಡಿ ಕೈಕುಲುಕಿದ. ಊಟಕ್ಕಿರಿರೆಂದು ಅಲೇಕ್ಸ್ಯನೂ ಹೇಳಲಿಲ್ಲ. ನಾವೂ ಉಳಿಯಲಿಲ್ಲ. ನಾನಂತೂ ಉಳಿಯುತ್ತಿರಲಿಲ್ಲ.

ಬಾಲ್ಕನಿಯಿಂದ ಮನೆಯ ಒಳಪಾಯಕ್ಕಿಳಿದು, ಪಡಸಾಲೆಯನ್ನು ದಾಟುತ್ತಿರುವಾಗ ಮದುವೆಯ ಸಂಭ್ರಮವೇ ನನ್ನನ್ನು ಗಮನಿಸಿ ಗೇಲಿ ಮಾಡಿದಂತನ್ನಿಸಿತು. ವೈಯಕ್ತಿಕ ವೈಫಲ್ಯದ ಪರಿಸ್ಥಿತಿಯಲ್ಲಿ, ಪರಸ್ಪರವೆಷ್ಟೇ ಸ್ನೇಹವಿದ್ದರೂ ಸ್ನೇಹಿತನ ಸಡಗರವು ಗಿಲೀಟಿನದನಿಸುತ್ತೇಕೆಂದು ಅನ್ನಿಸಿಬಂತು. ಅಲೇಕ್ಸ್ಯ ನಮ್ಮನ್ನು ಬೀಳ್ಕೊಡಲಿಕ್ಕೆಂದು ಬಾಗಿಲವರೆಗೂ ಬಂದ. ಮುಮ್ಮನೆಯಲ್ಲಿ ಚಪ್ಪಲಿ ಹಕ್ಕಿ ತೊಡುತ್ತಿರುವಾಗ, 'ಕಡೆಯದಾಗಿ ಒಂದು ಮಾತು – ಅಲೇಕ್ಸ್ಯ... ಅಕಸ್ಮಾತ್ ನಾನೊಪ್ಪಿದ್ದಿದ್ದರೆ ಐಕ್ಯಾಳನ್ನು ಮದುವೆ ಆಗುತ್ತಿದ್ದೆಯಾ?' ಎಂದು ಕೇಳಬೇಕನ್ನಿಸಿತು. ಕೇಳಲಿಲ್ಲ.

ಲಿಫ್ಟೊಳಹೊಕ್ಕು, ಕೆಳಕ್ಕಿಳಿಯುವಾಗ ಮಧುಕರಿಯ ಮೊಬೈಲು ಸದ್ದಿಸಿತು. ಸಿಗ್ನಲು ಕಡಿಮೆಯಿತ್ತಾಗಿ, 'ಹೆಲೋ ಹೆಲೋ... ಹೆಲೋ... ಮಗಳೇ...' ಎಂದು ಮಾತಿಗಿಳಿದು ಕೇಳಿಸಿಕೊಳ್ಳುವ ಪ್ರಯಾಸ ಮಾಡಿದ. ನಾನಂತೂ ಮಗಳ ಮಾತು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಬೆಂಗಳೂರಿನಲ್ಲಿ ನೆಲೆಸಿರುವ ವಸ್ತಾರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗ ನಿರತರು.